# ‘ಭಾರತವು ಪ್ರಾದೇಶಿಕ ವ್ಯಾಪಾರ ಒಪ್ಪಂದವನ್ನು ಬೆಂಬಲಿಸಲಿ’

ಬೆಂಗಳೂರು: ‘ಭಾರತವು ಪ್ರಾದೇಶಿಕ ವ್ಯಾಪಾರ ಒಪ್ಪಂದವನ್ನು (ಆರ್‌ಟಿಎ) ಬೆಂಬಲಿಸಬೇಕು. ಜೊತೆಗೆ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು’ ಎಂದು ಅಮೆರಿಕದ ಕಾನ್ಸಾಸ್ ಕಾನೂನು ವಿಶ್ವ-ವಿದ್ಯಾಲಯದ ಪ್ರಾಧ್ಯಾಪಕ ರಾಜ್ ಭಲಾ ಅಭಿಪ್ರಾಯಪಟ್ಟರು.

ಸಿಎಂಆರ್ ಕಾನೂನು ವಿಶ್ವವಿ-ದ್ಯಾಲಯ ಶುಕ್ರವಾರ ಹಮ್ಮಿಕೊಂಡಿದ್ದ ‘ಅಂತರರಾಷ್ಟ್ರೀಯ ವ್ಯಾಪಾರ ಕಾನೂನಿನಲ್ಲಿ ಹೊಸ ಪ್ರವೃತ್ತಿಗಳು’ ಕುರಿತ ಆನ್‌ಲೈನ್ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ‘ಆರ್‌ಟಿಎ ಒಪ್ಪಂದದಲ್ಲಿ ಚೀನಾ ಪ್ರಾಬಲ್ಯ ಹೊಂದಿದೆ. ಈ ಕಾರಣಕ್ಕಾಗಿ ಭಾರತ ಇದನ್ನು ಬೆಂಬಲಿಸಲು ಹಿಂದೇಟು ಹಾಕುತ್ತಿದೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಹೊಸ ಕ್ರಾಂತಿಯಾಗಬೇಕು. ದೇಶೀಯವಾಗಿ ಹಲವು ಸುಧಾರಣೆಗಳಾದಾಗ ಮಾತ್ರ ಇದು ಸಾಧ್ಯ’ ಎಂದರು.